ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

E-mail:eepwdspecialmysuru@gmail.com Phone No. & Fax No. 0821 2492297

ನಂ.ಕಾಇಂ:ಲೋಇ:ವಿವಿ:ಮೈ:ತಾಂತ್ರಿಕ:ಸ.ಇಂ-1:ಕಟ್ಟಡ ಸುರಕ್ಷತೆ:2025-26 993-94 11/7/25 ದಿನಾಂಕ:

ರವರಿಗೆ

ಅಧ್ಯಕ್ಷರು
ಗೀತಾಂಜಲಿ ಎಜುಕೇಷನ್ ಸೊಸೈಟಿ (ರಿ),
ಗೀತಾಂಜಲಿ ಇಂಟರ್ ನ್ಯಾಷನಲ್ ಗ್ಲೋಬಲ್ ಶಾಲೆ,
ಶ್ರೀರಾಂಪುರ 2ನೇ ಹಂತ,
ಬಿ.ಇ.ಎಂ.ಎಲ್ ಲೇಔಟ್, ಮೈಸೂರು.

ಮಾನ್ಯರೇ,

ವಿಷಯ: ಮೈಸೂರು ನಗರದ ಶ್ರೀರಾಂಪುರ 2ನೇ ಹಂತದ ಬಿ.ಇ.ಎಂ.ಎಲ್ ಲೇಔಟ್‌ನಲ್ಲಿರುವ ಗೀತಾಂಜಲಿ ಎಜುಕೇಷನ್ ಸೊಸೈಟಿ (ರಿ). ಗೀತಾಂಜಲಿ ಇಂಟರ್ ನ್ಯಾಷನಲ್ ಗ್ಲೋಬಲ್ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಬಿಇಡಿ:2019 ದಿನಾಂಕ: 06.05.2022
2. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಬಿಇಡಿ:2019 ದಿನಾಂಕ: 25.09.2024
3. ತಮ್ಮ ಮನವಿ ಪತ್ರ ದಿನಾಂಕ: 07.07.2024
4. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: 360 ದಿ: 09.07.2025

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3)ರ ಪತ್ರದಲ್ಲಿ ತಾವು ಕಾಲೇಜು ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿರುತ್ತೀರಿ. ಮುಂದುವರೆದು ಶ್ರೀರಾಂಪುರ 2ನೇ ಹಂತದ ಬಿ.ಇ.ಎಂ.ಎಲ್ ಲೇಔಟ್‌ನಲ್ಲಿರುವ ಗೀತಾಂಜಲಿ ಎಜುಕೇಷನ್ ಸೊಸೈಟಿ (ರಿ), ಗೀತಾಂಜಲಿ ಇಂಟರ್ ನ್ಯಾಷನಲ್ ಗ್ಲೋಬಲ್, ಮೈಸೂರು ರವರ ಶಾಲಾ/ಕಾಲೇಜು ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ದಿನಾಂಕ:08.07.2025 ರಂದು ಶಾಲೆಗೆ ಭೇಟಿ ನೀಡಿ ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಿ ವರದಿ ನೀಡಿರುತ್ತಾರೆ.

ಸದರಿ ಶಾಲೆ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಉಲ್ಲೇಖ(4)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ರವರು ಈ ಕೆಳಕಂಡ ಮಾಹಿತಿಯನ್ನು ಸಲ್ಲಿಸುತ್ತಾ, ಕಟ್ಟಡದ ಸುರಕ್ಷತ ಪ್ರಮಾಣ ಪತ್ರವನ್ನು ನೀಡಲು ಶಿಫಾರಸ್ಸು ಮಾಡಿರುತ್ತಾರೆ.

1. ಶಾಲೆಯು ನೆಲ ಅಂತಸ್ತು ಒಳಗೊಂಡಿದ್ದು, ಆರ್.ಸಿ.ಸಿ ಸ್ಲ್ಯಾಬ್ ಹಾಗೂ ಬೀಮ್‌ಗಳಿಂದ ನಿರ್ಮಿತವಾಗಿರುವ Framed Structure ನಿಂದ ಕೂಡಿರುವ ಕಟ್ಟಡವಾಗಿರುತ್ತದೆ.
2. ಕಟ್ಟಡವನ್ನು 2024ನೇ ವರ್ಷದಲ್ಲಿ ಪೂರ್ಣಗೊಳಿಸಿರುವುದಾಗಿ ತಿಳಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ AFFIDAVIT ನೀಡಿರುತ್ತಾರೆ.
3. ಸದರಿ ಶಾಲೆಯಲ್ಲಿ ಒಟ್ಟು 08 ಕೊಠಡಿಗಳಿದ್ದು, ಪ್ರಾಥಮಿಕ ಶಾಲೆ ನಡೆಸುತ್ತಿರುತ್ತಾರೆ.
4. ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಗೂ ಶಿಕ್ಷಕರು ಬಳಕೆಗಾಗಿ ಅಗತ್ಯವಿರುವಷ್ಟು ಶೌಚಾಲಯದ ವ್ಯವಸ್ಥೆ ಇರುತ್ತದೆ.

ಮು.ಪಿ.ನೋ.,

ಸದರಿ ಕಟ್ಟಡವು ಜುಲೈ-2025 ರಂದು ನಿರ್ಮಾಣಗೊಂಡಿರುವುದಾಗಿ "President, Geethanjali International Global School, Mysore" ರವರು Affidavit ನಲ್ಲಿ ತಿಳಿಸಿರುವುದರಿಂದ, ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯಂತೆ ಸದರಿ ಶಾಲಾ/ಕಾಲೇಜು ಕಟ್ಟಡಕ್ಕೆ ಯಾವುದೇ Non-destructive test ಗಳ ಅವಶ್ಯವಿರುವುದಿಲ್ಲ.

<u>ಶಾಲಾ ಆಡಳಿತ ಮಂಡಳಿಯು ಪಾಲಿಸಬೇಕಾದ ಕ್ರಮಗಳು:-</u>

1. ಸದರಿ ಶಾಲೆಗಳ ಕಟ್ಟಡವನ್ನು ಸೂಕ್ತ ದುರಸ್ಥಿಗಳೊಂದಿಗೆ ಪ್ರತಿ ವರ್ಷಕ್ಕೆ ನಿರ್ವಹಣೆ ಮಾಡಲು ಸೂಚಿಸಿದೆ.
2. ಸದರಿ ಶಾಲೆಯ ಛಾವಣಿ ಮೇಲೆ ಶೇಖರಣೆಯಾಗುವ ಕಸ ಕಡ್ಡಿಗಳನ್ನು ಕಾಲ ಕಾಲಕ್ಕೆ ಶುಚಿಗೊಳಿಸಲು ಹಾಗೂ ನೀರಿನ ಸ್ಪಾಟ್ಸ್‌ಗಳನ್ನು ಶುಚಿಯಾಗಿಡಲು ಸೂಚಿಸಿದೆ.
3. ಸದರಿ ಶಾಲಾ ಕಟ್ಟಡದ ಆವರಣದಲ್ಲಿ ಸುರಕ್ಷಿತ ನಿಯಮಗಳನ್ನು ಅಳವಡಿಸಲು ಸೂಚಿಸಿದೆ.
4. ಮುಂದುವರೆದು ಸದರಿ ಸುರಕ್ಷತಾ ಪ್ರಮಾಣ ಪತ್ರದ ಅವಧಿಯಲ್ಲಿ, ಶಾಲೆಯ ಕಟ್ಟಡವನ್ನು ವಿಸ್ತರಿಸಿದರೆ ಪುನಃ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಲು ಸೂಚಿಸಿದೆ. ಶಾಲೆಯ ಕಟ್ಟಡದ ಮೇಲಂತಸ್ತಿನಲ್ಲಿ ಬದಲಾವಣೆಗಳನ್ನು ತರಲು ಬಯಸಿದಲ್ಲಿ
   ಮಕ್ಕಳ ಹಿತ ದೃಷ್ಟಿಯಿಂದ ತಾಂತ್ರಿಕ ಸಲಹೆ ಪಡೆದು ಮುಂದುವರೆಯಲು ಸೂಚಿಸಲಾಗಿದೆ.
5. ಶಾಲಾ ಪರಿಮಿತಿಯನ್ನು ಶುಚಿಯಾಗಿ ಇಡುವುದು, ಶೌಚಾಲಯಗಳನ್ನು ಸ್ವಚ್ಛವಾಗಿ ಇಡುವುದು ಮತ್ತು ಮಳೆಯ ಸಂದರ್ಭಗಳಲ್ಲಿ ಛಾವಣಿಯಿಂದ ನೀರು ಸೋರದಂತೆ ಕ್ರಮ ವಹಿಸುವಂತೆ ತಿಳಿಸಿದೆ.

ಅಧ್ಯಕ್ಷರು, ಗೀತಾಂಜಲಿ ಎಜುಕೇಷನ್ ಸೊಸೈಟಿ (ರಿ), ಗೀತಾಂಜಲಿ ಇಂಟರ್ ನ್ಯಾಷನಲ್ ಗ್ಲೋಬಲ್ ಶಾಲೆ, ಶ್ರೀರಾಂಪುರ 2ನೇ ಹಂತ, ಬಿ.ಇ.ಎಂ.ಎಲ್ ಲೇಔಟ್, ಮೈಸೂರುರವರು ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಇಡಿ:43:ಪಿಜಿಸಿ:2022 ದಿನಾಂಕ: 18.05.2022 ಆದೇಶದಂತೆ ನಗರ ಪ್ರದೇಶದ ಶಾಲೆ/ಕಾಲೇಜು ಕಟ್ಟಡಗಳಿಗೆ ರೂ.5,000/- ಮತ್ತು ಜಿ.ಎಸ್.ಟಿ ಶುಲ್ಕ 900/- ಗಳನ್ನು ದಿನಾಂಕ:10.07.2025 ರಂದು ಯೂನಿಯನ್ ಬ್ಯಾಂಕ್, ಬೋಗಾದಿ ಶಾಖೆ, ಮೈಸೂರು, ಡಿ.ಡಿ.ಸಂಖ್ಯೆ:602991 & 602992 ರಲ್ಲಿ ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಕಟ್ಟಡವನ್ನು ಪರಿಶೀಲಿಸಿ, ಕಟ್ಟಡವು ಸದೃಢವಾಗಿರುವುದಾಗಿ ಉಲ್ಲೇಖ(4)ರ ಪತ್ರದಲ್ಲಿ ನೀಡಿರುವ ವರದಿಯನ್ನಾಧರಿಸಿ, ಕಾಲಕಾಲಕ್ಕೆ ಕಟ್ಟಡದ ನಿರ್ವಹಣೆಯನ್ನು ಕೈಗೊಳ್ಳುವ ಷರತ್ತಿಗೊಳಪಟ್ಟಂತೆ ಸದರಿ ಕಟ್ಟಡಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರ ಶಿಫಾರಸ್ಸಿನ ಅನ್ವಯ 05 ವರ್ಷಗಳ ಕಾಲಾವಧಿಗೆ ಅಂದರೆ 2025-26 ನೇ ಸಾಲಿನಿಂದ 2030-31 ರವರೆಗೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ವಿಶೇಷ ವಿಭಾಗ, ಮೈಸೂರು.